ಹಾದು ಹೋಗುವ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಗೆ ಮೇಲ್ದರ್ಜೆಗೇರಿಸಲು ಪರಿಶೀಲಿಸಲಾಗುತ್ತಿದೆ.

590(743) : ಶ್ರೀ ನರಸಿಂಹ ನಾಯಕ್ (ಸುರಪುರ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುರಪುರ ತಾಲ್ಲೂಕಿನ ಗ್ರಾಮಗಳಲ್ಲಿ ಸುಮಾರು 45ಕ್ಕೂ ಹೆಚ್ಚಿನ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು, ಐ.ಪಿ. ಸೆಟ್‌ಗಳು ಸುಟ್ಟು ಹೋಗಿ ವಿದ್ಯುತ್ ಹಾಗೂ ನೀರಿನ ತೊಂದರೆಯಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ವಿದ್ಯುತ್ ಟ್ರಾನ್ಸ್‌ಫಾರ್ಮರ್ ಮತ್ತು ಐ.ಪಿ. ಸೆಟ್ ಅಳವಡಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಸದರಿ ವಿಷಯದ ಬಗ್ಗೆ ಈಗಾಗಲೇ ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಂಡಿದ್ದರೂ ಸಹ ಗುಲ್ಬರ್ಗಾ ಜೆಸ್ಕಾಂ ಅಧಿಕಾರಿಗಳು 10 ತಿಂಗಳಿನಿಂದ ನಿರ್ಲಕ್ಷ್ಯ ತೋರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಎಷ್ಟು ದಿನಗಳಲ್ಲಿ 45 ಹಳ್ಳಿಗಳಿಗೆ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಮತ್ತು ಐ.ಪಿ. ಸೆಟ್ ಅಳವಡಿಸುವ ಕಾರ್ಯ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು ಗಮನಕ್ಕೆ ಬಂದಿದೆ.

ಆ) 25 ಕೆವಿಯ 11 ಪರಿವರ್ತಕಗಳಲ್ಲಿ 9 ಪರಿವರ್ತಕಗಳನ್ನು ಬದಲಾಯಿಸಲಾಗಿದ್ದು ಉಳಿದ 2ನ್ನು ಬದಲಾಯಿಸಬೇಕಾಗಿದೆ. 63 ಕೆ.ವಿ.ಯ 34 ಪರಿವರ್ತಕಗಳಲ್ಲಿ 12 ಪರಿವರ್ತಕಗಳನ್ನು ಬದಲಾಯಿಸಲಾಗಿದ್ದು ಉಳಿದ 22ನ್ನು ಬದಲಾಯಿಸಬೇಕಾಗಿದೆ. 100 ಕೆ.ವಿ.ಯ 18 ಪರಿವರ್ತಕಗಳಲ್ಲಿ 12 ಪರಿವರ್ತಕಗಳನ್ನು ಬದಲಾಯಿಸಲಾಗಿದ್ದು ಉಳಿದ 6ನ್ನು ಬದಲಾಯಿಸಬೇಕಾಗಿದೆ ಮತ್ತು 250 ಕೆ.ವಿ.ಎ. 3 ಪರಿವರ್ತಕಗಳನ್ನು ಬದಲಾಯಿಸಬೇಕಾಗಿದೆ.

ವಿಫಲವಾದ ಪರಿವರ್ತಕಗಳ ಕೊರತೆಯನ್ನು ನೀಗಿಸಲು ಬೇರೆ ವಿದ್ಯುತ್ ಸರಬರಾಜು ಕಂಪೆನಿಗಳಿಂದ ಎಣ್ಣೆ ಮತ್ತು ಪರಿವರ್ತಕಗಳನ್ನು ತರಿಸಲು ವ್ಯವಸ್ಥೆ ಮಾಡಲಾಗಿದೆ. ಎಣ್ಣೆ ಮತ್ತು ಪರಿವರ್ತಕಗಳು ಬಂದ ಕೂಡಲೇ ಪರಿವರ್ತಕಗಳನ್ನು ಬದಲಾಯಿಸಲು ಕ್ರಮ ಜರುಗಿಸಲಾಗುವುದು.

ಇ) ಕಳೆದ ಕೆಲವು ತಿಂಗಳುಗಳಲ್ಲಿ ಎಣ್ಣೆ ಹಾಗೂ ಮತ್ತಿತರ ಸಾಮಗ್ರಿಗಳ ಕೊರತೆಯಿಂದಾಗಿ ಮತ್ತು ನಿಸರ್ಗದ ಪ್ರಕೋಪದಿಂದಾಗಿ (ಹೆಚ್ಚು ಗಾಳಿ ಬೀಸಿ) ಪರಿವರ್ತಕಗಳು ಹೆಚ್ಚು ವಿಫಲವಾಗಿದ್ದು, ನಿರೀಕ್ಷಿತ ಮಟ್ಟದಲ್ಲಿ ದುರಸ್ತಿ ಮಾಡಲು ಹಾಗೂ ಬದಲಾಯಿಸಲು ಸಾಧ್ಯವಾಗಿಲ್ಲ. ಆದಷ್ಟು ಬೇಗನೆ ಪರಿವರ್ತಕಗಳನ್ನು ಬದಲಾಯಿಸುವ ಕ್ರಮ ಜರುಗಿಸಲಾಗುವುದು.

ಈ) ಆದಷ್ಟು ಬೇಗನೆ ಆದ್ಯತೆಯ ಮೇರೆಗೆ ಸುಟ್ಟು ಹೋದ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಮತ್ತು ಐ.ಪಿ. ಸೆಟ್ ಟ್ರಾನ್ಸ್‌ಫಾರ್ಮರ್ ಬದಲಾಯಿಸಲಾಗುವುದು.